ಕರ್ನಾಟಕ ಸರ್ಕಾರ

ಸಂಖ್ಯೆ : ಡಿಟಿಇ 126 ಇಎಸ್ (4)ಬಿ 2013

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001
ದಿನಾಂಕ-24.01.2014.

ಇವರಿಗೆ:

ಅಧ್ಯಕ್ಷರು
ಆಡಳಿತ ಮಂಡಳಿ
ರಾಜ್ಯ ಸರ್ಕಾರಿ ನೌಕರರ ಶಿಕ್ಷಣ ಸಂಘ ಪ.ಜಾ./ಪ.ಪಂ.
ತಾರಿಹಾಳ, ಹುಬ್ಬಳ್ಳಿ.

ಮಾನ್ಯರೆ,

ವಿಷಯ: ಎಸ್.ಜೆ.ಇ.ಎಸ್. ರೂರಲ್ ಪಾಲಿಟೆಕ್ನಿಕ್ ತಾರಿಹಾಳ ಸಂಸ್ಥೆಯವರು ತಪ್ಪು ವೇತನ ಪಟ್ಟಿ ನೀಡಿ ಹೆಚ್ಚು ವೇತನ ಪಡೆಯಲು ಕಾರಣರಾದ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ.

ಉಲ್ಲೇಖ:
1. ನಿರ್ದೇಶನಾಲಯದ ಅಧಿಕಾರಿಗಳ ತನಿಖಾ ತಂಡದ ವರದಿ ದಿನಾಂಕ: 22.01.2014.
2. ನಿರ್ದೇಶನಾಲಯದ ಅಧಿಕೃತ ಜ್ಞಾಪನ ಸಂಖ್ಯೆ: ಡಿಟಿಇ 33 ಡಿವಿಪಿ (1) 2013 ದಿನಾಂಕ: 23.01.2014.

****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (2) ರ ನಿರ್ದೇಶನಾಲಯದ ಅಧಿಕೃತ ಜ್ಞಾಪನದಲ್ಲಿ ಎಸ್.ಜೆ.ಇ.ಎಸ್.ರೂರಲ್ ಪಾಲಿಟೆಕ್ನಿಕ್ ತಾರಿಹಾಳ ಸಂಸ್ಥೆಯವರು ಸುಮಾರ್ ಏಪ್ರಿಲ್ 2013 ರಿಂದ ಸಿಬ್ಬಂದಿಗಳ ತಪ್ಪು ವೇತನ ಪಟ್ಟಿಯನ್ನು ನೀಡಿ ಹೆಚ್ಚು ವೇತನವನ್ನು ಪಡೆದಿರುವುದು ತನಿಖಾ ತಂಡದವರು ಸಲ್ಲಿಸಿರುವ ವರದಿಯಲ್ಲಿ ತಿಳಿಸಿರುವುದರಿಂದ ಈ ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ.ಎ.ಬಿ.ಕುಲಕರ್ಣಿ ಪ್ರಾಚಾರ್ಯರು, ಶ್ರೀ.ಎಂಎಸ್.ಪಾಟೀಲ್ ಅಧೀಕ್ಷಕರು ಮತ್ತು ಶ್ರೀ.ಕಾಮಶೆಟ್ಟಿ ದ್ವಿ.ದ.ಸ. ಇವರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಸೂಚಿಸಲಾಗಿದೆ.

ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಸಿಬ್ಬಂದಿಗಳ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವು ತಮಗೆ ಇರುವುದರಿಂದ ಶಿಕ್ಷಣ ಕಾಯ್ದೆ 1983 ರ ಸೂಕ್ತ ನಿಯಮಗಳಡಿಯಲ್ಲಿ ಸದರಿ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಈ ಬಗ್ಗೆ ಕ್ರಮವಹಿಸಿ ವರದಿ ಸಲ್ಲಿಸುವುದು.

ತಮ್ಮ ನಂಬುಗೆಯ

ನಿರ್ದೇಶಕರು

[illegible]
ಸಂ : 4026/
ದಿ. 24/1/2014
ಜತೆ.

S.B. Hotaker
24/1/14